

ಸರ್ಕಾರಿ ಶಾಲೆಯ ಶಿಕ್ಷಕರಿಗೆ ಕಾಲಕಾಲಕ್ಕೆ ತಕ್ಕ ತರಬೇತಿಗಳು ದೊರೆಯುತ್ತವೆ. ಅವರು ಮಕ್ಕಳ ಮನಸ್ಸನ್ನು ಹೆಚ್ಚು ಸೂಕ್ಷ್ಮವಾಗಿ ಗ್ರಹಿಸಬಲ್ಲರು' ಎನ್ನುವುದು ಭಾರತಿ ಅವರ ಅನಿಸಿಕೆ.

'ಇನ್ನು ಕನ್ನಡ ಮಾಧ್ಯಮದಲ್ಲಿ ಓದುವುದರಿಂದಾಗಿ ಮಕ್ಕಳಿಗೆ ಕೀಳರಿಮೆ ಉಂಟಾಗುತ್ತದೆ ಎಂಬ ಅನಿಸಿಕೆ ಹೆಚ್ಚಿನ ಪಾಲಕರಲ್ಲಿ ಇರುತ್ತದೆ. ಆದರೆ ನನ್ನ ಮಗ ನೇಸರನನ್ನು ನೋಡುವಾಗ ನನಗೆ ಹಾಗೇನೂ ಅನಿಸುವುದಿಲ್ಲ. ಅವನು ಇಂಗ್ಲಿಷ್ ಅನ್ನೂ ಕಲಿಯುತ್ತಿರುವುದರಿಂದ ಎಲ್ಲ ಮಕ್ಕಳ ಹಾಗೆಯೇ ಸಹಜವಾಗಿ ಬೆಳೆಯುತ್ತಿದ್ದಾನೆ. ಅವನು ಓದುತ್ತಿರುವ ಕುವೆಂಪು ಶತಮಾನೋತ್ಸವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸೇರುವ ಮಕ್ಕಳ ಸಂಖ್ಯೆ ಕಡಿಮೆಯಾದಾಗ ನಾವು ಪೋಷಕರೇ ಮನೆಗಳಿಗೆ ತೆರಳಿ ಸರ್ಕಾರಿ ಶಾಲೆಯಲ್ಲಿ ಮಕ್ಕಳನ್ನು ಓದಿಸಿ ಎಂದು ಕರಪತ್ರಗಳನ್ನು ಹಂಚಿದೆವು. ಸುಶಿಕ್ಷಿತರ ಮಕ್ಕಳೆಲ್ಲ ಈಗ ಸರ್ಕಾರಿ ಶಾಲೆಗೆ ಮಕ್ಕಳನ್ನು ಸೇರಿಸಲು ಮುಂದಾಗಿದ್ದಾರೆ. ತರಗತಿಯಲ್ಲಿ ಮಕ್ಕಳ ಸಂಖ್ಯೆಯೂ ಹೆಚ್ಚಾಗಿದೆ. ಶಾಲೆಯ ಈ ಎಲ್ಲ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಲು ನಮಗೆ ಸಮಾನ ಶಿಕ್ಷಣಕ್ಕಾಗಿ ಜನಾಂದೋಲನ ನಡೆಸುತ್ತಿರುವ ಮಂಡ್ಯದ ಎಂ.ಕೆ. ವಾಸು ಅವರೇ ಪ್ರೇರಣೆ' ಎಂದು ಭಾರತಿದೇವಿ ಹೇಳುತ್ತಾರೆ.

ವಾಸು ಅವರು, ಸಾಮಾಜಿಕ ಚಳವಳಿಗಳಲ್ಲಿ ತಮ್ಮನ್ನು ಗುರ್ತಿಸಿ ಕೊಂಡಿರುವವರು ಹಾಗೂ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ಟೌನ್ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರು.

## ಕಾರ್ಪೊರೆಟ್ ದಾಳಿ

ಖಾಸಗಿ ಶಾಲೆಗಳನ್ನು ಕೇಂದ್ರವಾಗಿಟ್ಟುಕೊಂಡು ರೂಪುಗೊಳ್ಳುತ್ತಿರುವ ಜನಪ್ರಿಯ ಶೈಕ್ಷಣಿಕ ನಂಬಿಕೆಗಳ ಹಿನ್ನೆಲೆಯಲ್ಲಿ ವಾಸು ಅವರು ಸ್ಪಷ್ಟವಾಗಿ ಹೇಳುವುದು – 'ಇದು ಭಾಷೆಯ ದಾಳಿಯಲ್ಲ. ಕಾರ್ಪೊರೆಟ್ ವ್ಯವಹಾರದ ದಾಳಿ.'



ಎಂ.ಕೆ. ವಾಸು

ಶಿಕ್ಷಣ ಕ್ಷೇತ್ರದಲ್ಲಿ ಪ್ರಯೋಗಾತ್ಮಕ ಕೆಲಸಗಳನ್ನು ಮಾಡಿರುವ ಹಿನ್ನೆಲೆ ವಾಸು ಅವರಿಗಿದೆ. ಕನ್ನಡ ಮಾಧ್ಯಮದಲ್ಲೇ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ದೊರೆಯಬೇಕು ಎಂಬುದನ್ನು ಒತ್ತಿ ಹೇಳುವ ಅವರು, 'ಕಲಿಕೆಯ ಮತ್ತು ಭಾಷೆಯ ಮಹತ್ವ ಗೊತ್ತಿಲ್ಲದವರು ಇಂಗ್ಲಿಷ್ ಎಂಬ ಒಂದು ಮಾಧ್ಯಮದ ಮೂಲಕ ಜ್ಞಾನವಾಹಿನಿಯಾದ ಭಾಷೆಯನ್ನೇ ಕೊಂದು ಹಾಕುತ್ತಿದ್ದಾರೆ' ಎಂದು ಬೇಸರ ವ್ಯಕ್ತಪಡಿಸುತ್ತಾರೆ.

ಸರ್ಕಾರಿ ಶಾಲೆಗೆ ಮಕ್ಕಳನ್ನು ಕರೆತರುವ ನಿಟ್ಟಿನಲ್ಲಿ ವಾಸು ಅವರು ಹತ್ತು ಹಲವು ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೃಷ್ಣರಾಜಪೇಟೆಯ ಸರ್ಕಾರಿ ಶಾಲೆಗೆ ಮತ್ತೆ ಮಕ್ಕಳು ಬರುವಂತಾಗಲು ಸಾಕಷ್ಟು ಶ್ರಮಿಸಿದ್ದಾರೆ.